ಕೊಲ್ಕೊತ್ತಾದಲ್ಲಿ ಪುಟ್ಟ ಮನೆಯೊಂದರಲ್ಲಿ ದಂಪತಿ ವಾಸವಾಗಿದ್ದರು. ಇದೇ ಸಮಯದಲ್ಲಿ ಮಗ ನವರುನ್ ಆಗಮನವಾಯಿತು. ಬಡತನದ ಮೊದಲ ನಿಕಟ ಪರಿಚಯ ಆದುದು ಆಗಲೇ. ಬೆಳಕು ಹರಿಯುವ ಮೊದಲು ಮನೆ ಬಿಡುತ್ತಿದ್ದ ಬಿಜೊನ್ ಮನೆಗೆ ಮರಳುತ್ತಿದ್ದುದು ಕತ್ತಲೆ ಆದಮೇಲೆಯೇ. ಮಗುವಿನ ಹಾಲಿನಪುಡಿ ಡಬ್ಬಿಯ ಹೊರತು ಮನೆಯಲ್ಲಿ ಆಹಾರಪದಾರ್ಥಗಳು ಇರುತ್ತಿರಲಿಲ್ಲ. ಎಷ್ಟೋ ದಿನಗಳು ಮಹಾಶ್ವೇತಾ–ಬಿಜೊನ್ ಉಪವಾಸ ಇದ್ದರು. ಮಹಾಶ್ವೇತಾ ಅವರಿಗೆ ಕೆಲಸ ಇರಲಿಲ್ಲ. ಅಂಚೆ ಇಲಾಖೆಯಲ್ಲಿನ ಹಿರಿಯ ಗುಮಾಸ್ತೆಯ ಕೆಲಸವನ್ನು ಕಮ್ಯುನಿಸ್ಟ್ ಎನ್ನುವ ಕಾರಣಕ್ಕಾಗಿ ಅವರು ಕಳೆದುಕೊಳ್ಳಬೇಕಾಯಿತು. ಬಿಜೊನ್ ಅವರಿಗೆ ಕೂಡ ಸರಿಯಾದ ನೌಕರಿ ಇರಲಿಲ್ಲ. ಸ್ವಾಭಿಮಾನಿಯಾದ ಮಹಾಶ್ವೇತಾ ಅವರಿಗೆ ಯಾರ ಬಳಿಯೂ ಕೈಯೊಡ್ಡುವ ಅಭ್ಯಾಸ ಇರಲಿಲ್ಲ.

ಬದುಕು ದುರ್ಬರ ಎನ್ನಿಸಿದಾಗ ಮಹಾಶ್ವೇತಾ ಅವರು ದುಡ್ಡು ಸಂಪಾದನೆಗಾಗಿ ಸಿಕ್ಕ ಕೆಲಸವನ್ನೆಲ್ಲ ಒಪ್ಪಿಕೊಳ್ಳುವ ಸ್ಥಿತಿ ಎದುರಾಯಿತು. ಬರವಣಿಗೆ ಮಾಡಿದರು, ಸೋಪುಗಳನ್ನು ಮಾರಿದರು. ಇದೇ ಸಮಯದಲ್ಲಿ ವೈದ್ಯಕೀಯ ಅಧ್ಯಯನಕ್ಕೋಸ್ಕರ 15 ಸಾವಿರ ಕೋತಿಗಳನ್ನು ಅಮೆರಿಕಾಗೆ ರಫ್ತು ಮಾಡುವ ಕೆಲಸವೊಂದನ್ನು ಅವರು ಒಪ್ಪಿಕೊಂಡರು. ಪ್ರಾಣಿಹಿಂಸೆಯ ಪಾಪಪ್ರಜ್ಞೆ ಆ ಕ್ಷಣದಲ್ಲಿ ಅವರಿಗೆ ಅಷ್ಟೇನೂ ಮುಖ್ಯವೆನ್ನಿಸಿರಲಿಲ್ಲ. ಬದುಕಿಗೆ ಅಗತ್ಯವಾದ ಹಣವನ್ನು ಹೊಂಚಿಕೊಳ್ಳುವ ಒಂದು ಅವಕಾಶದ ರೂಪದಲ್ಲಿ ಕೋತಿಗಳ ರಫ್ತನ್ನು ಅವರು ಒಪ್ಪಿಕೊಂಡರು. ಮಧ್ಯವರ್ತಿಯೊಬ್ಬನ ಮೂಲಕ ಕೋತಿಗಳನ್ನು ಸಂಗ್ರಹಿಸಿದ್ದೂ ಆಯಿತು. ಆದರೆ, ವಿಚಿತ್ರ ಸನ್ನಿವೇಶದಲ್ಲಿ ಆ ಕೋತಿಗಳನ್ನು ಅಮೆರಿಕಾಗೆ ಕಳಿಸುವುದು ಸಾಧ್ಯವಾಗಲಿಲ್ಲ. ಈ ಪ್ರಕರಣ ಒಂದು ವಿವಾದವಾಗಿ ಬದಲಾಯಿತು. ಕೊನೆಗೆ ಕೋತಿಗಳನ್ನು ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಬಿಡಲಾಯಿತು.

ಕಷ್ಟಗಳು ಮನುಷ್ಯರನ್ನು ಕಟುವಾಗಿಸುವುದು ಸಹಜ. ಆದರೆ, ತಾವು ಎದುರಿಸಬೇಕಾಗಿ ಬಂದ ಸಂಕಷ್ಟಗಳ ಬಗ್ಗೆ ಮಹಾಶ್ವೇತಾ ಅವರಿಗೆ ಯಾವುದೇ ದೂರುಗಳು ಇರಲಿಲ್ಲ. ಕಷ್ಟಗಳು ಅವರಲ್ಲಿ ಕಹಿ ಉಳಿಸಲಿಲ್ಲ. ಮುಂದಿನ ದಿನಗಳ ಬದುಕಿಗೆ ಪೂರ್ವಸಿದ್ಧತೆಯಂತೆ ಅವರಿಗೆ ಅಂದಿನ ಬದುಕು ಕಾಣಿಸಿತ್ತು. ಇಷ್ಟೆಲ್ಲ ಹೊಂದಾಣಿಕೆಯ ಬದುಕಿನ ನಂತರವೂ ಮಹಾಶ್ವೇತಾ ಹಾಗೂ ಬಿಜೊನ್ ಇಬ್ಬರೂ ಬೇರೆ ಬೇರೆಯಾದರು. ಬದುಕಿನ ದಿಕ್ಕು ಬದಲಾದುದು ಏಕೆ ಎನ್ನುವ ಖಾಸಗಿ ಸಂಗತಿಯನ್ನು ಮಹಾಶ್ವೇತಾ ಅವರು ಎಂದೂ ಹೇಳಲಿಲ್ಲ. ವೈಯಕ್ತಿಕ ಸಂಬಂಧಗಳ ಬಗ್ಗೆ ಎಂದೂ ಅಗೌರವದಿಂದ ಮಾತನಾಡಲಿಲ್ಲ.

ಬಿಜೊನ್ ಅವರಿಂದ ವಿಚ್ಛೇದನ ಪಡೆದ ಮಹಾಶ್ವೇತಾ ಅವರು ಅಸಿತ್ ಗುಪ್ತ ಅವರನ್ನು ಮದುವೆಯಾದರು. ಬದುಕು ಮತ್ತೊಂದು ಮಗ್ಗಲಿಗೆ ಹೊರಳಿತು. 1963ರಲ್ಲಿ ಎಂ.ಎ ಪದವಿ ಪಡೆದುಕೊಂಡ ಅವರು ಅಧ್ಯಾಪಕಿಯಾದರು. 1984ರಲ್ಲಿ ಹುದ್ದೆಗೆ ರಾಜೀನಾಮೆ ನೀಡಿ ಪೂರ್ಣ ಪ್ರಮಾಣದಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು.

ಸಾರ್ವಜನಿಕ ಬದುಕಿನಲ್ಲಿಯೇ ಜೀವನದ ಸಂತೋಷವನ್ನು ಕಾಣಲು ಅವರು ಪ್ರಯತ್ನಿಸಿದಂತಿತ್ತು. ಬಿಜೊನ್ ಅವರೊಂದಿಗೆ ಸಂಬಂಧ ಕಡಿದುಕೊಂಡಾಗ ಮಗ ನವರುನ್‌ಗೆ ಹನ್ನೊಂದು ವರ್ಷ. ಮಗ ತನ್ನ ತಂದೆಯೊಂದಿಗೆ ಉಳಿದಿದ್ದ. ನಂತರದ ದಿನಗಳಲ್ಲಿ ಅಮ್ಮ–ಮಗನ ನಡುವೆ ನಿರಂತರ ಮಾತುಕತೆಗಳೇನೂ ಇರಲಿಲ್ಲ. ಅಮ್ಮನಂತೆ ನವರುನ್ ಕೂಡ ಕೇಂದ್ರ